



ಅರುಣ ಪಿ. ಭಟ್ಟ

# ವಾರಭವಿಷ್ಯ: 07.09.2023ರಿಂದ 13.09.2023ರವರೆಗೆ



ಮೇಷ

ನಿಮ್ಮ ಸಾಮಾಜಿಕ ಹಾಗೂ ರಾಜಕೀಯದ ಬದುಕು ವೃದ್ಧಿಯಾಗುತ್ತಾ ಸಾಗುತ್ತದೆ. ದೈಹಿಕವಾಗಿ ಆಯಾಸ ಅನುಭವಕ್ಕೆ ಬರಲಿದ್ದು, ಇದರಿಂದ ಬೇಸರಕ್ಕೆ ಒಳಗಾಗಲಿದ್ದೀರಿ. ವಾರದ ಮಧ್ಯ ಭಾಗದಲ್ಲಿ ಉದ್ಯೋಗಸ್ಥರಿಗೆ ಪ್ರಗತಿ ಕಾಣುತ್ತದೆ. ಆರೋಗ್ಯದಲ್ಲೂ ಚೇತರಿಕೆ ಕಾಣಿಸಿಕೊಳ್ಳುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆದಾಯ ಉತ್ತಮವಾಗುತ್ತದೆ. ಶುಭದಿನ 12. ಸೌಂದರ್ಯ ಲಹರಿ ಪಠಿಸಿರಿ.



ವೃಷಭ

ವ್ಯಾಪಾರ ವಿಸ್ತರಣೆ ಸಲುವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರುಗಳು ಕಾಣಿಸಿಕೊಳ್ಳಬಹುದು. ವಾರದ ಮಧ್ಯ ಭಾಗದಲ್ಲಿ ಪಾರ್ಟಿಯಲ್ಲಿ ಭಾಗವಹಿಸುವ ಸಾಧ್ಯತೆ ಇದೆ. ರಾಜಕಾರಣಿಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಗತಿ ಸಿಗಬಹುದು. ಸಂಗಾತಿ ಜೊತೆಗೆ ಉದ್ವಿಗ್ನ ವಾತಾವರಣ ಇರುತ್ತದೆ. ವ್ಯವಹಾರಗಳಲ್ಲಿ ಅತ್ಯುತ್ತಮವಾದ ಪ್ರಗತಿಯನ್ನು ಕಾಣಲಿದ್ದೀರಿ. ಶುಭದಿನ 11. ಶಿವಕವಚ ಪಠಿಸಿರಿ.



ಮಿಥುನ

ನೀವು ಹಾಕಿದ ಶ್ರಮಕ್ಕೆ ಉತ್ತಮ ಪ್ರತಿಫಲ ದೊರೆಯಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮುಂದುವರಿಸಲಿದ್ದೀರಿ. ಆರೋಗ್ಯದಲ್ಲಿ ಸಮಸ್ಯೆ ಆಗುತ್ತದೆ. ವಾರದ ಮಧ್ಯಭಾಗದಲ್ಲಿ ಬಹಳ ಕಾಲದಿಂದ ಬಾಕಿ ಉಳಿದಿದ್ದ ಕೆಲಸವನ್ನು ಪೂರ್ಣಗೊಳಿಸುತ್ತೀರಿ. ಅದಕ್ಕಾಗಿ ಅಧಿಕಾರಿಗಳ ನೆರವು ಪಡೆಯುತ್ತೀರಿ. ಮಾಡಿದ ತಪ್ಪಿನ ಫಲಿತಾಂಶವನ್ನು ಅನುಭವಿಸಬೇಕಾಗುತ್ತದೆ. ಶುಭದಿನ 09. ಕಾಲಭೈರವನ ಸೇವೆ ಮಾಡಿರಿ.



ಕಟಕ

ಅಂದುಕೊಂಡ ವೇಗದಲ್ಲಿ ಸಂಪತ್ತು ವೃದ್ಧಿ ಆಗುತ್ತಿಲ್ಲ ಎಂಬ ಚಿಂತೆ ಕಾಡುತ್ತದೆ. ವಾರದ ಮಧ್ಯ ಭಾಗದಲ್ಲಿ ನಿಮ್ಮ ಪಾಲಿನ ಗ್ರಹಗತಿ ಸ್ವಲ್ಪ ಮಟ್ಟಿಗೆ ಸಕಾರಾತ್ಮಕವಾಗಿದೆ. ವೈವಾಹಿಕ ಜೀವನ ಸುಮಧುರವಾಗಿರುತ್ತದೆ. ಈ ಅವಧಿಯಲ್ಲಿ ನೀವು ಹೊಸ ವ್ಯಾಪಾರ ಆರಂಭಿಸುವ ಸಾಧ್ಯತೆಗಳಿವೆ. ಕೆಲವು ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಇದೆ. ಶುಭದಿನ 10. ಚಂಡಿ ಪಾರಾಯಣ ಮಾಡಿರಿ.



ಸಿಂಹ

ನೀವು ಹಾಕಿದ ಶ್ರಮಕ್ಕೆ ಯಶಸ್ಸು ದೊರೆಯಲಿದೆ. ನಿಮ್ಮ ಸ್ಥಾನಮಾನವು ಉತ್ತಮಗೊಳ್ಳಲಿದೆ. ವಾರದ ಮಧ್ಯಭಾಗದಲ್ಲಿ ಇತರರು ನಿಮಗೆ ತೊಂದರೆ ನೀಡುತ್ತಾರೆ. ಆರೋಗ್ಯದ ವಿಚಾರದಲ್ಲಿ ಏರುಪೇರು ಆಗಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಸಮಸ್ಯೆ ಸಹಜ ಸ್ಥಿತಿಗೆ ಮರಳುತ್ತದೆ. ಮನೆಗೆ ಹೊಸ ಅತಿಥಿಯೊಬ್ಬರು ದೀರ್ಘ ಕಾಲದ ಅವಧಿಗೆ ಬರಬಹುದು. ಶುಭದಿನ 08. ಲಿಂಗಾಷ್ಟಕ ಪಠಣ ಮಾಡಿರಿ.



ಕನ್ಯಾ

ಕೆಲವರಿಗೆ ಏಕತಾನತೆ ಕಾಡಬಹುದು. ಇನ್ನೂ ಕೆಲವರಿಗೆ ಯಾರ ಮಾತು ಕೇಳದಂಥ ಮನಸ್ಥಿತಿ ಆಗಬಹುದು. ಇದರಿಂದ ಹೊರ ಬನ್ನಿ. ನಿಗದಿತ ಅವಧಿಯೊಳಗೆ ವಹಿಸಿದ ಕೆಲಸವನ್ನು ಪೂರ್ಣಗೊಳಿಸಿ. ಉದ್ಯೋಗ ಸ್ಥಳದಲ್ಲಿನ ನಿಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಚರ್ಚೆ ಅಂತಿಮಗೊಳ್ಳಲಿದೆ. ಈ ಅವಧಿಯಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 09. ಸಂಕಷ್ಟಹರ ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.



ತುಲಾ

ಉದ್ಯಮಿಗಳಿಗೆ ಉತ್ತಮವಾದ ಸಮಯ. ನೆರೆಹೊರೆಯವರ ಜತೆಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳಲು ಹಲವು ಬಗೆಯಲ್ಲಿ ಅವಕಾಶ ದೊರೆಯಲಿದೆ. ಉಸಿರಾಟ ಸಮಸ್ಯೆ ಮಂಡಿ ನೋವು ನಿಮ್ಮನ್ನು ಕಾಡಬಹುದು. ಮೇಲಿಂದ ಮೇಲೆ ಕೌಟುಂಬಿಕ ಸಮಸ್ಯೆಗಳು ನಿಮ್ಮನ್ನು ಕಾಡಲಿವೆ. ಮಾನಸಿಕ ಕ್ಷೋಭೆ ನಿಮ್ಮನ್ನು ಕಾಡುತ್ತದೆ. ಶುಭದಿನ 10. ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಿಸಿರಿ.



ವೃಶ್ಚಿಕ

ಆಗಬೇಕಾದ ಕೆಲಸವೊಂದನ್ನು ಯಾರಾದರೂ ಪೂರ್ಣಗೊಳಿಸುತ್ತಾರೆ. ಯಾವುದಕ್ಕೂ ಹಿರಿಯ ಅಧಿಕಾರಿಗಳ ಸಲಹೆ ಪಡೆಯಲು ಸಮಯ ಸಿಗುತ್ತದೆ. ವಾರದ ಮಧ್ಯ ಭಾಗದಲ್ಲಿ ಹತ್ತಿರದ ಸ್ಥಳವೊಂದಕ್ಕೆ ಪ್ರವಾಸ ತೆರಳುವ ಸಾಧ್ಯತೆಗಳಿವೆ. ಸಾಮಾಜಿಕವಾಗಿ ನಿಮ್ಮ ಸ್ಥಾನಮಾನ ಹೆಚ್ಚಾಗಲಿದೆ. ಉದ್ಯಮಿಗಳಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶುಭದಿನ 11. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.



ಧನಸ್ಸು

ನಿಮಗೆ ವೈಯಕ್ತಿಕವಾಗಿ ಇದ್ದ ಗುರಿಗಳ ಪೈಕಿ ಒಂದೊಂದಾಗಿ ಪೂರ್ತಿಗೊಳಿಸುತ್ತೀರಿ. ನಿಮ್ಮ ವ್ಯಕ್ತಿತ್ವದಲ್ಲೇ ಸಕಾರಾತ್ಮಕತೆ ಕಾಣಿಸಿಕೊಳ್ಳುತ್ತದೆ. ಜ್ಞಾನ, ಮನಸ್ಸು ಎರಡೂ ಒಟ್ಟೊಟ್ಟಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತವೆ. ಅದೃಷ್ಟ ಹಾಗೂ ಸಂತೋಷ ಎರಡೂ ನಿಮ್ಮ ಪಾಲಿಗೆ ಇರುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಕೆಲ ಸಮಸ್ಯೆಗಳು ತಲೆದೋರುತ್ತವೆ. ಶುಭದಿನ 12. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.



ಮಕರ

ವೈವಾಹಿಕ ಜೀವನದಲ್ಲಿ ಅಸಮಾಧಾನ ಕಾಣಿಸಿಕೊಳ್ಳುತ್ತದೆ. ಸಂಗಾತಿ ಜೊತೆ ಮೇಲಿಂದ ಮೇಲೆ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳುತ್ತದೆ. ಇದೇ ನಿಮ್ಮ ಸಮಸ್ಯೆಗೆ ಕಾರಣವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಾನಸಿಕವಾಗಿ ಬಹಳ ಕಿರಿಕಿರಿ ಅನುಭವಿಸುತ್ತೀರಿ. ಈಗಾಗಲೇ ಒತ್ತಡ ಎದುರಿಸುತ್ತಿರುವ ಸಂಬಂಧಗಳಲ್ಲಿ ಮತ್ತಷ್ಟು ಉದ್ವಿಗ್ನ ಪರಿಸ್ಥಿತಿ ಏರ್ಪಡುತ್ತದೆ. ಶುಭದಿನ 12. ವಿಷ್ಣು ಸಹಸ್ರನಾಮ ಪಠಿಸಿರಿ.



ಕುಂಭ

ವಿದ್ಯಾರ್ಥಿಗಳಿಗೆ ಪ್ರಗತಿ ಇದೆ. ಆದಾಯ ಮೂಲದಿಂದ ಹೆಚ್ಚುವರಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ನಿಮ್ಮ ಸಂತೋಷ ಹೆಚ್ಚಾಗಲಿದೆ. ವಾರದ ಮಧ್ಯಭಾಗದಲ್ಲಿ ನೀವು ತೆಗೆದುಕೊಂಡ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತೀರಿ. ಖರ್ಚು ವೆಚ್ಚಗಳು ಹೆಚ್ಚಾಗಿ ಚಿಂತೆಗೆ ಕಾರಣ ಆಗಲಿದೆ. ಶುಭದಿನ 09. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



ಮೀನ

ನಿಮ್ಮ ಆರೋಗ್ಯವು ಉತ್ತಮವಾಗಿರುತ್ತದೆ. ಈ ಸಮಯದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದರಿಂದ ಸಕಾರಾತ್ಮಕ ಯೋಚನೆ ಮೂಡುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಕೆಲವು ವಿಚಾರಗಳು ನೀವು ಅಂದುಕೊಂಡ ರೀತಿ ನಡೆಯುವುದಿಲ್ಲ. ಇದರಿಂದ ಬಹಳ ನೊಂದುಕೊಳ್ಳುತ್ತೀರಿ. ವಾರದ ಮಧ್ಯಭಾಗದಲ್ಲಿ ಆದಾಯ ವಿಸ್ತರಣೆಗೆ ಅವಕಾಶಗಳಿವೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಶುಭದಿನ 08. ಹನುಮಾನ್ ಚಾಲೀಸ್ ಓದಿರಿ.